# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : 367(350)
2) ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ: : 10/12/2020
4) ಉತ್ತರಿಸುವ ಸಚಿವರ ಹೆಸರು : ಮಾನ್ಯ ಮುಖ್ಯ ಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರ ವಿಧಿಸಿದ ಸಂಪೂರ್ಣ ಲಾಕ್‌ಡೌನ್‌ನಿಂದ ರಾಜ್ಯದಲ್ಲಿ ಜಿ.ಎಸ್.ಟಿ. ನಿವ್ವಳ ಸಂಗ್ರಹಣೆಯಲ್ಲಿ ಖೋತಾ ಆಗಿರುವುದು ನಿಜವೇ; ಹಾಗಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು; | ಹೌದು, ರಾಜ್ಯದಿಂದ 2019-20 (ನವಂಬರ್ ಅಂತ್ಯದವರೆಗೆ) ಮತ್ತು 2020-21 (ನವಂಬರ್ ಅಂತ್ಯದವರೆಗೆ) ಅನುಕ್ರಮವಾಗಿ ರೂ.26592 ಕೋಟಿ ಮತ್ತು ರೂ.23338 ಕೋಟಿ ಜಿ.ಎಸ್.ಟಿ. ಸಂಗ್ರಹವಾಗಿರುತ್ತದೆ. 2019-20ನೇ ವರ್ಷಕ್ಕೆ ಹೋಲಿಸಿದಾಗ 2020-21ನೇ ವರ್ಷದಲ್ಲಿ ಜಿ.ಎಸ್.ಟಿ ಸಂಗ್ರಹಣೆ ರೂ.3254 ಕೋಟಿಯಷ್ಟು ಕಡಿಮೆಯಾಗಿರುತ್ತದೆ. |
| ಆ) | ಈ ತೆರಿಗೆ ಸಂಗ್ರಹಣೆ ಖೋತಾವನ್ನು ನೀಗಿಸಲು ಕೇಂದ್ರ ಸರ್ಕಾರ ಸೂಚಿಸಿರುವ ಮಾರ್ಗೋಪಾಯಗಳೇನು; (ವಿವರಗಳನ್ನು ಒದಗಿಸುವುದು) | ರಾಜ್ಯಗಳು ಸಂಪೂರ್ಣ ನಷ್ಟ ಪರಿಹಾರವನ್ನು ಪಡೆಯಲು ಅರ್ಹತೆಯನ್ನು ಹೊಂದಿರುತ್ತವೆ. ಕೇಂದ್ರ ಸರ್ಕಾರದಿಂದ 2020-21 ನೇ ಸಾಲಿನಲ್ಲಿ (ನವಂಬರ್ ಅಂತ್ಯದವರೆಗೆ) ಬರಬೇಕಾಗಿರುವ ನಷ್ಟ ಪರಿಹಾರದ ಮೊತ್ತ ರೂ.23057 ಕೋಟಿಯಷ್ಟಿದ್ದು, ಇದರಲ್ಲಿ ರೂ.1777 ಕೋಟಿ ನಷ್ಟ ಪರಿಹಾರ ಬಂದಿರುತ್ತದೆ ಮತ್ತು ನಷ್ಟ ಪರಿಹಾರ ಸಾಲ ರೂ.4317 ಕೋಟಿ ಬಂದಿದ್ದು, ರೂ.16963 ಕೋಟಿ ಬಾಕಿ ಬರಬೇಕಾಗಿರುತ್ತದೆ.<br>ಜಿ.ಎಸ್.ಟಿ. ತೆರಿಗೆ ಪದ್ಧತಿ ಜಾರಿಗೆ ಬಂದಾಗಿನಿಂದ, ರಾಜ್ಯಗಳಿಗೆ ಉಂಟಾಗುತ್ತಿರುವ ಕೊರತೆಯನ್ನು (2015-16ರ ಪ್ರಕಾರ ರಾಜ್ಯಗಳ ತೆರಿಗೆ ಸಂಗ್ರಹಣೆ ಮೊತ್ತಕ್ಕೆ, ನಿಗದಿಪಡಿಸಿದ ಏರಿಕೆ ದರದಂತೆ) ಕೇಂದ್ರ ಸರ್ಕಾರವು ಸೆಸ್ ಕಾಯ್ದೆ 2017ರ ಮುಖಾಂತರ ಸಂಗ್ರಹಿಸುತ್ತಿರುವ ಸೆಸ್ ನಿಂದ ಪ್ರತಿ ವರ್ಷವು ತುಂಬಿಕೊಡುತ್ತಿದೆ. 2020-21 ನೇ ಸಾಲಿನಲ್ಲಿ ಕೋವಿಡ್ ಸಾಂಕ್ರಾಮಿಕದಿಂದ ಉಂಟಾಗಿರುವ ಹಾನಿಯು ಇದರಲ್ಲಿ ಸೇರಿದ್ದು, ಒಟ್ಟಾರೆ ಕೊರತೆಯನ್ನು ಕೇಂದ್ರ ಸರ್ಕಾರವು ಸಾಲದ ಮುಖಾಂತರ ರಾಜ್ಯಗಳಿಗೆ ತುಂಬಿಕೊಡಲು ಒಪ್ಪಿರುತ್ತದೆ. ಈ ಸಾಲದ ಅಸಲು ಮತ್ತು ಬಡ್ಡಿಯ ಮೊತ್ತವನ್ನು ಮುಂದಿನ ವರ್ಷಗಳಲ್ಲಿ ಸಂಗ್ರಹವಾಗುವ ಸೆಸ್ ಮೊತ್ತದಿಂದ ಮರುಪಾವತಿ ಮಾಡಲಾಗುತ್ತದೆ. |
| ಇ) | ಕೇಂದ್ರ ಸರ್ಕಾರದ ಮಾರ್ಗೋಪಾಯಗಳಲ್ಲಿ ರಾಜ್ಯ ಸರ್ಕಾರ ಅನುಸರಿಸಿರುವ ಅಥವಾ ಆಯ್ಕೆ ಮಾಡಿಕೊಂಡಿರುವ ಮಾರ್ಗೋಪಾಯಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಎರಡು ಆಯ್ಕೆಗಳಲ್ಲಿ ರಾಜ್ಯವು ಆಯ್ಕೆ -1 ನ್ನು ಆಯ್ದುಕೊಂಡಿರುತ್ತದೆ. ತೆರಿಗೆ ನಷ್ಟ ಪರಿಹಾರ ಸಾಲವನ್ನು ರಾಜ್ಯಗಳು ಪಡೆಯುವುದರಿಂದ ಅಸಲು ಮತ್ತು ಬಡ್ಡಿಯ ಮರುಪಾವತಿಯ ಹೊರೆಯು ರಾಜ್ಯಗಳ ಮೇಲಿರದೇ ಸಂಗ್ರಹವಾಗುವ ಸೆಸ್ಸು ಮೊತ್ತದಿಂದ ಪಾವತಿಸಲಾಗುವುದು. |

| | | |
|---|---|---|
| ಈ) | ಈ ಮಾರ್ಗೋಪಾಯದ ರೀತ್ಯಾ, ರಾಜ್ಯ ಸರ್ಕಾರ ವಾಣಿಜ್ಯ ಬ್ಯಾಂಕ್‌ಗಳಿಂದ / ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪಡೆದಿರುವ ಸಾಲವೆಷ್ಟು; ಈ ಸಾಲಗಳ ಮಂಜೂರಾತಿಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ನಿರ್ವಹಿಸಬೇಕಾಗಿರುವ ನಿಬಂಧನೆಗಳ ವಿವರ ನೀಡುವುದು; | ಆಯ್ಕೆ 1 ರ ರೀತ್ಯಾ ರಾಜ್ಯ ಸರ್ಕಾರ ಯಾವುದೇ ವಾಣಿಜ್ಯ ಬ್ಯಾಂಕ್‌ಗಳಿಂದ / ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಸಾಲ ಪಡೆದಿರುವುದಿಲ್ಲ. ಬದಲಾಗಿ ಕೇಂದ್ರ ಸರ್ಕಾರವು ಒಟ್ಟು ರೂ.12,407 ಕೋಟಿಗಳ ಸಾಲವನ್ನು ಪಡೆದು Special Window ಮುಖಾಂತರ ರಾಜ್ಯಕ್ಕೆ ನೀಡುತ್ತಿದೆ. ಈ ಸಾಲದ ಮೇಲಿನ ಹೊಣೆಗಾರಿಕೆಯನ್ನು ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ. ಈ ಸಾಲದ ಮೇಲಿನ ಅಸಲು ಮತ್ತು ಬಡ್ಡಿಯ ಮರುಪಾವತಿಯನ್ನು GST Cess ಸಂಗ್ರಹಣೆಯ ಮೂಲಕ ಕೇಂದ್ರ ಸರ್ಕಾರವೇ ಭರಿಸಲಿದೆ. ಈ ಸಾಲ ಹೊಣೆಗಾರಿಕೆಯು ರಾಜ್ಯಕ್ಕೆ ಇರುವುದಿಲ್ಲ. |
| ಉ) | ವಾಣಿಜ್ಯ ಬ್ಯಾಂಕ್/ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪಡೆದಿರುವ ಸಾಲಗಳಲ್ಲಿ ಇಲಾಖಾವಾರು ಹಂಚಿಕೆಯಾಗಿರುವ ವಿವರ ನೀಡುವುದು; ಈ ಹಂಚಿಕೆಯಲ್ಲಿ ಕೇವಲ ನೀರಾವರಿ ಇಲಾಖೆಗೆ ಅತಿ ಹೆಚ್ಚು ಹಂಚಿಕೆಯಾಗಲು ಕಾರಣವೇನು; ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಇತರೆ ಇಲಾಖೆಗಳಾದ ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಲೋಕೋಪಯೋಗಿ ಮತ್ತು ಸಣ್ಣ ನೀರಾವರಿ ಇಲಾಖೆಗಳನ್ನು ಕಡೆಗಣಿಸಲು ಕಾರಣವೇನು? (ಸಂಪೂರ್ಣ ವಿವರ ನೀಡುವುದು) | ಉದ್ಭವಿಸುವುದಿಲ್ಲ. |

ಸಂಖ್ಯೆ: ಆಇ 73 ಸಿಎಸ್‌ಎಲ್ 2020 (e)

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ.